# ಭಾರತ ಚುನಾವಣಾ ಆಯೋಗ

**ಮತದಾರರ ನೋಂದಣಿ ಅಧಿಕಾರಿಗಳು ಮತ್ತು ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು**

**ಅನುಬಂಧ-ಬಿ1**

**ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯ ತಯಾರಿಕೆ**

**ಮತದಾರರ ನೋಂದಣಿ ನಿಯಮಗಳು 1960ರ ಅಡಿ ನಿಯಮ 31(4)ರ ಮೇರೆಗೆ ಸೂಚನೆ**

ಮತದಾರರ ನೋಂದಣಿ ನಿಯಮಗಳು, 1960ರ 31(3)ನೇ ನಿಯಮದ ಅನುಸಾರ, ಮತದಾರರ ನೋಂದಣಾಧಿಕಾರಿಗಳು, ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರರವರು ತಮ್ಮ 01ನೇ ಅಕ್ಟೋಬರ್ 2016ರ ಸೂಚನೆಯಲ್ಲಿ ಮೇಲ್ಕಂಡ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಹಕ್ಕುಳ್ಳ ಪ್ರತಿಯೊಬ್ಬ ವ್ಯಕ್ತಿಗೆ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಸಲುವಾಗಿ ಮತದಾರರ ನೋಂದಣಿ ನಿಯಮಗಳು, 1960ಕ್ಕೆ ಲಗತ್ತಿಸಲಾದ ಹಾಗೂ 1ನೇ ಅಕ್ಟೋಬರ್ 2016ರಂದು (1) ಡೆಕ್ಕನ್ ಹೆರಾಲ್ಡ್ ಮತ್ತು (2) ವಿಜಯವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿರುವ ಸೂಚನೆಯಲ್ಲಿ ಯಥಾವತ್ತಾಗಿ ಪುನರುಚ್ಚರಿಸಿರುವ ನಮೂನೆ 19ರಲ್ಲಿನ ಅರ್ಜಿಯನ್ನು ಭರ್ತಿ ಮಾಡಿ 7ನೇ ನವೆಂಬರ್ 2016ರಂದು ಅಥವಾ ಅದಕ್ಕೂ ಮೊದಲು, ಸದರಿ ಸೂಚನೆಯ ಮೊದಲನೇ ಅನುಸೂಚಿಯಲ್ಲಿ ನಮೂದಿಸಿರುವ ಅಧಿಕಾರಿಗಳಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಲಾಗಿತ್ತು.

ಈಗಾಗಲೇ ಸಲ್ಲಿಸದಿದ್ದಲ್ಲಿ, ಮೇಲೆ ತಿಳಿಸಿದ ಎಲ್ಲಾ ಹಕ್ಕುಳ್ಳ ವ್ಯಕ್ತಿಗಳು ನಮೂನೆ-19ರಲ್ಲಿ ತಮ್ಮ ಅರ್ಜಿಯನ್ನು 7ನೇ ನವೆಂಬರ್ 2016ರಂದು ಅಥವಾ ಅದಕ್ಕೂ ಮೊದಲು ಸಲ್ಲಿಸಬಹುದಾಗಿರುತ್ತದೆ.

ಈ ವಿವರಗಳು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕರವರ ಅಂತರ್ಜಾಲ ತಾಣ (ವೆಬ್‌ಸೈಟ್) www.ceokarnataka.kar.nic.in ರಲ್ಲಿ ಸಹ ಲಭ್ಯವಿರುತ್ತದೆ.

**ಎಂ.ವಿ. ಜಯಂತಿ, ಮತದಾರರ ನೋಂದಣಾಧಿಕಾರಿಗಳು, ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರ**
**ಹಾಗೂ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ**

Jayanthi

ಪ್ರಾದೇಶಿಕ ಆಯುಕ್ತರು
ಬೆಂಗಳೂರು ವಿಭಾಗ, ಬೆಂಗಳೂರು